


**ಸಿಮೊನ್ ದ ಬೋವಾ**
**ಮಾತು ಕಥನ**
ಕನ್ನಡಕ್ಕೆ: ವಿಕ್ರಮ ವಿಸಾಜಿ
ಪು: 320 ಬೆಲೆ: ₹ 300
ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ ಅಂಚೆ,
ವಯಾ ಎಮ್ಮಿಗನೂರ, ಬಳ್ಳಾರಿ – 583 113
ದೂರವಾಣಿ: 88800 87235

ಪುಸ್ತಕಗಳು – ಹೀಗೆ ಬೇರೆ ಬೇರೆ ಭಾವನೆಗಳನ್ನು ಸಮಾಜದ ಎದುರು ಇಡುವುದು ಅತ್ಯಂತ ಕಷ್ಟ. ನೈತಿಕತೆಯ ನಿಯಂತ್ರಣಗಳನ್ನು ದಾಟುವುದು ಸುಲಭವಲ್ಲ. ಅದು ನಮ್ಮ ಅಸ್ತಿತ್ವದ ಪ್ರಶ್ನೆಯೂ ಹೌದು. 'ನನಗೀಗ ಪುಸ್ತಕಗಳ ರಹಸ್ಯಮಯ ಜಗತ್ತು ತೆರೆದುಕೊಳ್ಳತೊಡಗಿತ್ತು. ಓದಬಾರದೆಂದು ಹೇಳಿಕೊಟ್ಟ ಪುಸ್ತಕಗಳನ್ನೆಲ್ಲ ಓದತೊಡಗಿದೆ. ಶೌಚಾಲಯದಲ್ಲಿ ಕುಳಿತಾಗ ಹಳೆಯ ಪತ್ರಿಕೆ, ಪುಸ್ತಕಗಳನ್ನು ಗಂಟೆಗಟ್ಟಲೆ ಓದುವ ಹವ್ಯಾಸವಿತ್ತು. ಕಾದಂಬರಿಗಳನ್ನು ಹೆಚ್ಚು ಓದತೊಡಗಿದ್ದೆ. ಅದರಲ್ಲೂ ನಾಯಕನಾದವನು ಪ್ರೇಯಸಿಯ ಎದೆಯನ್ನು ಚುಂಬಿಸುವ ದೃಶ್ಯಗಳು ಮೈಯನ್ನು ಬೆಚ್ಚಗಾಗಿಸುತ್ತಿದ್ದವು. ಅಲ್ಲಿ ನಾಯಕನೂ ನಾನೇ, ಪ್ರೇಯಸಿಯೂ ನಾನೇ ಮತ್ತು ಓದುಗಳೂ ನಾನೆ. ಕೆಲವೊಮ್ಮೆ ಭಾವನೆಗಳ ಏರುಪೇರಿನಲ್ಲಿ ನನ್ನ ಮುಂಗೈ ಮತ್ತು ತೋಳುಗಳನ್ನು ಚುಂಬಿಸಿಕೊಳ್ಳುತ್ತಿದ್ದೆ. ನನ್ನ ದೇಹದಲ್ಲಿ ಲೈಂಗಿಕ ಆಸಕ್ತಿಗಳು ಚಿಗುರೊಡೆಯುತ್ತಿದ್ದವು. ಕಾದಂಬರಿಯ ಲೈಂಗಿಕ ದೃಶ್ಯಗಳನ್ನು ಕಲ್ಪಿಸಿಕೊಳ್ಳುತ್ತ ನಿದ್ದೆಹೋಗುತ್ತಿದ್ದೆ. ಮನಸ್ಸಿನ ತುಂಬ ಅವೇ ಚಿತ್ರಗಳು. ಇಂಥದ್ದೆಲ್ಲ ಮನಸ್ಸಿನಲ್ಲಿ ಯಾಕೆ ಉಳಿದುಬಿಡುವುದು ಅಂತ ಅಚ್ಚರಿಯಾಗುತ್ತಿತ್ತು'. ಬೋವಾ ಎಲ್ಲವನ್ನೂ ಹೇಳಿಕೊಳ್ಳುತ್ತಾಳೆ (ಪು. 11). ಅವಳು ಹೇಳುವಂತೆ ಕಾಮ ಆಕೆಯನ್ನು ಕಾಡಿದೆ. ಈ ಲೇಖನದ ಘಟನಾವಳಿಗಳು ಅವಳ ಜೀವನದ ಮುನ್ನುಡಿಯಂತೆ ಇವೆ. ಈ ಪುಸ್ತಕದ ಪ್ರವೇಶಿಕೆಯಂತೆಯೂ ಈ ಆರಂಭದ ಲೇಖನವನ್ನು ಓದಬಹುದು. ಬೋವಾರ ನೆನಪು, ಉಪನ್ಯಾಸ, ಪತ್ರಗಳು, ಸಂದರ್ಶನ, ತಾತ್ವಿಕ ಲೇಖನ ಮತ್ತು ಪ್ರವಾಸ ಕಥನದ ತಣುಕುಗಳು ಈ ಪುಸ್ತಕದಲ್ಲಿ ಅನುವಾದಿತವಾಗಿವೆ.

ಈ ಕೃತಿಯನ್ನು ಓದುವಾಗ ನಮಗೆ ಬೋವಾ ಮಾತ್ರವೇ ಕಂಡು ಬರುವುದಿಲ್ಲ. ಇದರಲ್ಲಿ ವಿವಿಧ ಚಿಂತನೆಗಳ ಸೂತ್ರಗಳು ಕೂಡ ಬಂದಿವೆ. ಇಡೀ ಕೃತಿಯನ್ನು ನಾವು ವ್ಯಕ್ತಿಯೊಬ್ಬನ ಬದುಕಿನ ಕಥನದ ತರಹ ಓದಬಹುದು. ಮತ್ತೊಂದು ದೃಷ್ಟಿಯಲ್ಲಿ ಇದನ್ನು ಚರಿತ್ರೆಯ ಭಾಗವಾಗಿಯೂ ನೋಡಬಹುದು. 'ದ ಪ್ರೈಮ್ ಆಫ್ ಲೈಫ್' ಎಂಬ ಎರಡನೇ ಲೇಖನವು ನಮಗೆ ಇದನ್ನು ಸೂಚಿಸುತ್ತದೆ. ಇದರಲ್ಲಿ ಒಂದು ಕಡೆಯಿಂದ ಪ್ಯಾರಿಸ್ಸಿನ ಬೌದ್ಧಿಕ ಜೀವನ ಹೇಗಿತ್ತು ಎಂಬುದನ್ನು ಹೇಳಲಾಗಿದೆ. ಮತ್ತೊಂದು ಕಡೆಯಿಂದ ಸಾರ್ತ್ರನ ಜೀವನದ ಕುರಿತೂ ಪ್ರಸ್ತಾಪ ಮಾಡಲಾಗಿದೆ. ಅವನು ಹೇಳಿದ ಮಾತನ್ನು ಇಲ್ಲಿ ಬೋವಾ ಉಲ್ಲೇಖಿಸುತ್ತಾಳೆ: 'ಯಾರದೇ ಬಗ್ಗೆ ಕಟ್ಟುವ ಕಟ್ಟು ಕತೆಗಳು ಆ ವ್ಯಕ್ತಿಗೆ ನಾವು ಮಾಡುವ ಹಿಂಸೆಗೆ ಸಮಾನ' (ಪು. 27). ಇದು ನಿಜವಾದ ಮಾತು ಎಂದು ನಮಗೂ ಅನಿಸುತ್ತದೆ. ಆದ್ದರಿಂದಲೇ ಈ ಮಾತು ಯಾವತ್ತಿಗೂ ಪ್ರಸ್ತುತ. ಅನೇಕ ವರ್ಷ